ಮಾತು ಆಕೆ ಗಮನದ ವ್ಯಾಪ್ತಿಯನ್ನು ಮೀರಿ ಹೋಗಿ ತಾನೊಮ್ಮೆ ಇಂತಹದೇ ನೋವಿನ ಬೇರೆ ಆಯಾಮವನ್ನು ಕುತೂಹಲದಿಂದ ಕಾಯುತ್ತಿದ್ದೆ ಎನ್ನುವ ನೆನಪಾಯಿತು. ಕೊರಳು ಬಿಗಿದು ಬಂದಿತು. "ನೀವು ಅನಾವಶ್ಯಕವಾಗಿ ಎಕ್ಸೈಟ್ ಆಗುತ್ತಿದ್ದೀರಿ... ಹೀಗಾಗಿಯೇ ಮೂರು ಸಲ ಇನ್ಸೆಮಿನೇಷನ್ ಮಾಡಿದಾಗಲೂ ಫೇಲ್ ಆಗಿದೆ, ಪ್ಲೀಸ್ ಅರುಂಧತಿ ಸ್ವಲ್ಪ ಕೋಆಪರೇಟ್ ಮಾಡಿ, ಮದುವೆಯಾಗದ ಹುಡುಗಿಯರಿಗಾದರೆ ಈ ಎಲ್ಲ ಹೊಸದಾಗಿರತ್ತೆ. ಮದುವೆಯಾಗಿ ನಾಲ್ಕು ವರ್ಷ ಆದ ಮೇಲೆ ಇಂತದ್ದೆಲ್ಲ ಇರಲ್ಲ ಅಲ್ವಾ" ಡಾಕ್ಟರ್ ಸ್ವಲ್ಪ ಅವಮಾನಿಸುವ ಹಾಗೆ ನಕ್ಕು ನುಡಿದರು. "ನನ್ನ ಸರ್ವೀಸಿನಲ್ಲಿ ನೀವು ಇನ್ನೂರ ಹದಿನೈದನೇ ಕೇಸು. ಈವರೆಗೆ ಯಾವುದೂ ಫೇಲ್ ಆದದ್ದೇ ಇಲ್ಲ" ಎನ್ನುತ್ತ ತನ್ನ ಕಾರ್ಯವಾಪ್ತಿಯ ವಿವರವನ್ನು ನೀಡುತ್ತ ಒಂದು ರೀತಿಯ ಗತ್ತಿನಲ್ಲಿ ಹೇಳುವಾಗ 'ಆದ ತಪ್ಪುಗಳೆಲ್ಲವೂ ನಿನ್ನಿಂದಲೇ ಆಗುತ್ತಿವೆ' ಎಂದು ಆರೋಪಿಸಿದಂತೆ ಆಕೆಗೆ ತೋರತೊಡಗಿತು. ಈ ಎಲ್ಲ ರಗಳೆಗಳ ಅನುಭವಿಸಿ ತಾನೇಕೆ ಈ ರೀತಿಯಿಂದ ಮಗುವನ್ನು ಪಡೆಯಬೇಕು, ಅಂತಹ ಅಗತ್ಯವಾದರೂ ಏನಿದೆ ತನಗೆ? ಈ ಜೀವದ ಅವಶ್ಯಕತೆಯಾದರೂ ಏನು? ಹೆಣ್ತನದ ಸಾಬೀತು ಮತ್ತು ಸಾರ್ಥಕತೆ ಪ್ರಚುರ ಪಡಿಸುವುದಕ್ಕಾ? ಯಾವುದಕ್ಕೆ? ಹೀಗೆ ಮುಟ್ಟಾದ ದಿನಗಳ ಎಲ್ಲರ ಎದುರಲ್ಲಿ ಬಿಡಿಸಿ ಹೇಳುತ್ತ ಸ್ಕ್ಯಾನಿಂಗ್ ಯಂತ್ರದ ನಡುವೆ ಬಟ್ಟೆ ಕಳಚಿ, ಅಂಡಾಣು ಇದೆಯೋ ಇಲ್ಲವೋ ಇದ್ದರೆ ಎಷ್ಟು ದಿನವಿರುತ್ತದೆ, ಈಗ ವೀರ್ಯಾಣು ಸೇರಿಸಿದರೆ ಮಗು ಆಗುತ್ತದೋ ಇಲ್ಲವೋ? ಹೀಗೆ ನೂರೆಂಟು ಪ್ರಶ್ನೆಗಳ ಹಿಂದೆ ತಿರುಗುತ್ತಿರುವುದಾದರೂ ಯಾವುದಕ್ಕೆ? ಗಂಡು ಹೆಣ್ಣು ಪಟ್ಟ ಸುಖದ ಸಾಕ್ಷಿ ಎಂಬಂತೆ ರೂಪು ತಳೆದು ಬರಬೇಕಾದ ಜೀವ ಹೀಗೆ ಸಿರೆಂಜಿನ ನಡುವಿನಿಂದ ಇಂಜೆಕ್ಷನ್ನಿನ ಹಾಗೆ ನೋವು ನೀಡುತ್ತ ಒಳ ಸುಳಿದು ಹುಟ್ಟನ್ನು ಬರಿಸುವ ಈ ಕ್ರಿಯೆ ಯಾರ ಸಲುವಾಗಿ? ಜಗತ್ತಿನ ಸಲುವಾಗಿಯಾ? ನನ್ನ ಸಲುವಾಗಿಯಾ? ನಾನು ಸುಖದ ತುತ್ತ ತುದಿಯಲ್ಲಿ ನಿಂತಿದ್ದೇನೆ ಎಂದು ಜಗಜ್ಜಾಹೀರು ಮಾಡಲಿಕ್ಕಾ? ಅಥವಾ ಒಂಟಿತನವನ್ನು ಕಳಚಿ ನಿಲ್ಲುವುದಕ್ಕಾ? ತಾನು ಬಂಜೆಯಲ್ಲ ಎನ್ನುವುದು ತೋರಿಸುವುದಕ್ಕಾ? ನಾಲ್ಕು ಗೋಡೆಗಳ ನಡುವಿರುವ ಸುಳ್ಳಿನ ಮುಖಕ್ಕೊಂದು ಸತ್ಯದ ಮುಖವಾಡ ಹಾಕಲಿಕ್ಕಾ? ಈಗ ತಾನು ಹೀಗೆ ಬಂದು ಮಲಗಿರುವುದು ಸ್ವಾರ್ಥದ ಸಂಕೇತವಲ್ಲದೆ ಮತ್ತೇನು? ಹೀಗೆ ಸಾವಿರ ಸಾವಿರ ಪ್ರಶ್ನೆಗಳು ಪ್ರತಿಬಾರಿಯಂತೆ ಈ ಬಾರಿಯೂ ಅರುಂಧತಿಯ ಎದುರು ಬಂದು ನಿಂತು ದಾಳಿ ಮಾಡತೊಡಗಿದವು. ಮನಸ್ಸು ಮುದ್ದೆಯಾಯಿತು. ಆ ಭಾಗದ ಎಲ್ಲ ನರಗಳನ್ನು ತನ್ನ ಕೈವಶ ಮಾಡಿಕೊಂಡು ಸೆಟೆದುಕೊಂಡಳು. "ನೀವು ಹೀಗೆ ಮಾಡಿದರೆ ಕಷ್ಟ ಆಗತ್ತೆ" ವೈದ್ಯೆ ಹತಾಶೆಯ ದನಿಯಲ್ಲಿ ಹೇಳಿ ಸುಮ್ಮನೆ ನಿಂತಳು. ಅವಳಿಗೆ ತನ್ನನ್ನು ಅಂದರೆ 'ಗೌತಮ್ ಗ್ರೂಪ್ ಆಫ್ ಕಂಪೆನಿಯ ಛೇರ್ಮನ್ ಹೆಂಡತಿ'ಯನ್ನು ಗದರಿಸುವ ಶಕ್ತಿ ಇದ್ದಂತೆ ತೋರಲಿಲ್ಲ. ಅವಳ ಹತಾಶ ಭಾವ ನೋಡಿದ ಅರುಂಧತಿ, "ಸಾರಿ" ಎನ್ನುತ್ತ ಮೈ ನರಗಳ ಸಡಿಲಿಸಿ ಮಲಗಿದಳು. "ಹೌದು ತಾನು ಹೀಗೆ ಇಲ್ಲಿ ಮಲಗಿರುವುದು ಸ್ವಾರ್ಥದಿಂದಲೇ ಅಲ್ಲದೆ ಮತ್ತೇನು ಅಲ್ಲ. ಕುಹಕ ಕಣ್ಣುಗಳ ಎದುರಿಸಲಾಗದ ಸ್ವಾರ್ಥ, ಕಟ್ಟಿಕೊಂಡ ಗೌರವದ ಬದುಕು ಕುಸಿದು ಹಾಳಾಗಬಾರದೆಂಬ ಸ್ವಾರ್ಥ. 'ಅರುಂಧತಿಯ ಅದೃಷ್ಟ ನೋಡೆ ತಿಪ್ಪೆಯಲ್ಲಿದ್ದವಳು ಅರಮನೆಯಲ್ಲಿ ಮೆರೆಯುತ್ತಿದ್ದಾಳೆ' ಎನ್ನುವ ಸಂಬಂಧಿಕರ ಅಸೂಯೆಗಳನ್ನು ಹಾಗೆಯೇ ಉಳಿಸುವ ಸ್ವಾರ್ಥ. ಚಂದದ ಮಗುವಿನ ತಾಯಾಗಬೇಕು ಎನ್ನುವ ಸ್ವಾರ್ಥ. ಹೌದು ಅದೇ ಕಾರಣವಲ್ಲದೆ ಮತ್ತೇನು ಅಲ್ಲ. ತನ್ನದೇ ಪ್ರಶ್ನೆಗೆ ಸಿದ್ಧ ಉತ್ತರವೊಂದನ್ನು ಹುಡುಕಿಕೊಂಡ